ಶ್ರೀ ಸಿದ್ದಯ್ಯ ಕಾಶಿಮಠ್.—ರಾಜ್ಯದಲ್ಲಿರುವ ಎಲ್ಲ ಪ್ರಾಥಮಿಕ ಶಾಲೆಗಳನ್ನೂ ಸರ್ಕಾರ ದವರೇ ವಹಿಸಿಕೊಂಡು ಬೆಳಗಾಂ, ಬಿಜಾಪುರ, ಧಾರವಾಡ, ಮತ್ತು ಕಾರವಾರ ಜಿಲ್ಲೆಗಳಲ್ಲಿ ಸ್ಕೂರ್ ಬೋರ್ಡ್ ಪತಿಯಿಂದ ನಡೆಸುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದ ಇಚ್ಛೆ ಹಾಗೇನೂ ಇಲ್ಲ. ಎಲ್ಲ ಕಡೆಯೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬೋರ್ಡ್‌ಗಳನ್ನು ಮಾಡಬೇಕೆಂದು ಪಂಚಾಯಿತಿ ರಾಜ್ಯ ವಿಧೇಯಕದಲ್ಲಿ ಒಂದು ವಿಶೇಷ ಪ್ರಾವಿಷನ್ ಇದೆ. ಆದರೆ ಇದಕ್ಕೆ ಒಂದು ಪ್ರತ್ಯೇಕ ವಿಧೇಯಕವನ್ನು ತಂದು ಅದಕ್ಕೆ ಅಂಗೀ ಕಾರ ಪಡೆಯಬೇಕು ಎನ್ನುವ ಇಚ್ಛೆ ಸರ್ಕಾರಕ್ಕೆ ಇದೆ. ಆರ್-ಇಂಡಿಯಾ ಎಜುಕೇಷನ್ ಕಮಿಷನ್ ಅವರು ಒಂದು ಸ್ಟಾಚ್ಯೂಟರಿ ಬಾಡಿ ಮಾಡಬೇಕೆಂದು ಏನು ಹೇಳಿದ್ದಾರೆ ಅದರಂತೆ ಈಗ ಪಂಚಾ ಯಿತಿ ರಾಜ್ ವಿಧೇಯಕದಲ್ಲಿ ಪ್ರಾವಿಜನ್ ಮಾಡಿದ್ದೇವೆ ಇದಕ್ಕೆ ಒಂದು ಸಬ್-ಕಮಿಟಿಯನ್ನು ಮಾಡಿ ದ್ದೇವೆ. ಸ್ಟಾಚ್ಯೂಟರಿ ಬಾಡಿ ಮಾಡಬೇಕೆಂದು ಸರ್ಕಾರದ ಇಚ್ಛೆ ಇದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಮಾನ್ಯ ಮಂತ್ರಿಗಳು ಹೇಳಿದಂಥ 5,685 ಮಂದಿ ಶಿಕ್ಷಕರಲ್ಲಿ ಟ್ರೇನಿಂಗ್ ಆದವರು ಎಷ್ಟು ಜನ, ಮೊನ್ನೆ ಹೊಸದಾಗಿ ತೆಗೆದುಕೊಂಡವರಲ್ಲಿ ಆಗಿಲ್ಲದೆ ಇರುವವರು ಹೆಚ್ಚು ಜನ ಇದ್ದಾರೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.—ಧಾರವಾಡ ಜಿಲ್ಲೆಯ ಮಟ್ಟಿಗೆ ಹೇಳಬೇಕಾದರೆ, ಮುಂಬೈ ಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ, ಬಹಳ ಜನ ಟ್ರೇನಿಂಗ್ ಆದವರು ಇರುತ್ತಾರೆ, ಟ್ರೇನಿಂಗ್ ಆಗಿಲ್ಲದವರು ಕಡಮೆ ಇರುತ್ತಾರೆ. ಒಂದೊಂದು ಜಿಲ್ಲೆಯಲ್ಲಿ 600 ಮಂದಿ, 800 ಮಂದಿ, ನಾಏರ ಮಂದಿವರೆಗೆ ಮಾತ್ರ ಟ್ರೇನಿಂಗ್ ಆಗಿಲ್ಲದವರು ಇದ್ದಾರೆ. ಈ ಪ್ರಮಾಣ ಬಹಳ ಕಡಮೆ ಇದೆ. ಹೊಸ ದಾಗಿ ಏನು ಶಿಕ್ಷಕರನ್ನು ತೆಗೆದುಕೊಂಡಿದ್ದೇವೆ ಅದರಲ್ಲಿ ಕೂಡ ಟ್ರೇನಿಂಗ್ ಆದವರನ್ನೇ ತೆಗೆದು ಕೊಂಡಿದ್ದೇವೆ.

Sri S. SIVAPPA.—Is it the policy of the Government to hand over education to private enterprise or will Government itself take care of education ?

Sri S. R. KANTHI.—Education is not going to be handed over to private enterprise in sense in which my friend wants it. It is going to be decentralised. The idea of Government is to set up District Education Boards in every district. There is a provision in the Panchayatiraj Act for a special committee of the Zilla Parishad. The present thinking of the Education Commission is that instead of a special committee there should be a statutory body at the district level and primary and secondary education will be handed over to them.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇರುವ ಸಿಬ್ಬಂದಿಯನ್ನು ಗಮನಿಸಿದರೆ 50 ಮಕ್ಕಳಿಗೆ ಒಬ್ಬ ಉಪಾಧ್ಯಾಯರಿದ್ದಂತಾಗುವುದರಿಂದ ಸರಿಯಾಗಿ ಶಿಕ್ಷಣ ಕೊಡಲು ಸಿಬ್ಬಂದಿ ಸಾಲದೆಂಬುದು ಗಮ ನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದೊಂದೇ ಕಡೆ ಅಲ್ಲ, ಎಲ್ಲ ಕಡೆಯೂ ಸಿಬ್ಬಂದಿ ಕೊರತೆ ಇದೆ. ಈ ಸಲ 25 ಸಾವಿರ ಉಪಾಧ್ಯಾಯರನ್ನು ತೆಗೆದುಕೊಳ್ಳಬೇಕೆಂದಿದ್ದೆವು. ಆದರೆ 14 ಸಾವಿರ ಮಾತ್ರ ತೆಗೆದುಕೊಳ್ಳಲು ಸಾಧ್ಯವಾಯ್ತು. ನಾಲ್ಕನೆಯ ಯೋಜನೆಯಲ್ಲಿ ಪರಿಸ್ಥಿತಿ ಸುಧಾರಿಸಬಹುದೆಂಬ ನಂಬಿಕೆ ಇದೆ.

Acquisition of Land for Village extension.

*Q.—71.—Smt. G. C. BHAGEERATHAMMA (Tumkur).—

Will the Government be pleased to state :—

(*a*) whether it is a fact that acquisition proceedings for village extension at Vengalamanahally in Koratagere Taluk, Tumkur District, were finalised and order of award was passed long back ;

(Smt. G. C. BHAGEERATHAMMA)

(*b*) if so, why the possession of land was not given to the villagers;

(*c*) whether they would expedite the handing over of possession early ?

A.—Sri M. V. KRISHNAPPA (Minister for Revenue).—

(*a*) Yes.

(*b*) For non-availability of relevant vernacular records readily.

(*c*) Possession of the acquired land was given to the concerned Village Panchayat on 22nd October 1965.

ಶ್ರೀಮತಿ ಜಿ. ಸಿ. ಭಾಗೀರತಮ್ಮ.—ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಯಾವ ಭಾಷೆಯಲ್ಲಿವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಕನ್ನಡದಲ್ಲಿವೆ, ಮತ್ತೆ ಕೆಲವು ಇಂಗ್ಲೀಷಿನಲ್ಲಿವೆ, ಹೈದರಾಬಾದು ಪ್ರದೇಶದವು ಉರ್ದುವಿನಲ್ಲಿವೆ.

ಶ್ರೀ ಕೆ. ಲಕ್ಕಪ್ಪ.—ಇದು ಯಾವ ಗ್ರಾಮ ಪಂಚಾಯಿತಿಗೆ ಸೇರಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ವೆಂಗಲಮನಹಳ್ಳಿ ಕೊರಟಗೆರೆ ತಾಲ್ಲೂಕಿನಲ್ಲಿಲ್ಲ ಎಂಬುದು ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಕೇಳಿರುವ ಹೆಸರು ಬೇರೆ ಇರಬಹುದು, ನಮಗೆ ಬಂದಿರುವ ವರದಿ ಪ್ರಕಾರ ಉತ್ತರ ಕೊಟ್ಟಿರುವುದು ಸರಿಯಾಗಿದೆ.

Amendments to Prohibition Act.

*ಫ್ರ.—82. Sri B. BHASKARA SHETTY (Kaup).—

Will the Government be pleased to state :—

(*a*) whether they have decided to amend the Prohibition Act to effect savings to meet the present grave sitnaction in the country;

(*b*) if so, the salient features of the amendments proposed;

(*c*) when these changes would be given effect to ?

A.—Sri RAMAKRISHNA HEGDE (Minister for Finance).—

(*a*) No.

(*b*) and (*c*) Does not arise in view of reply to (*a*).

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪಾನನಿರೋಧ ಕಾನೂನನ್ನು ತಿದ್ದುಪಡಿ ಮಾಡದಿದ್ದರೆ ಶ್ರಿಮತಿ ಯಶೋಧರಮ್ಮನವರೇಕೆ ಮಂತ್ರಿಪದವಿಗೆ ರಾಜೀನಾಮೆ ಕೊಡುತ್ತಿದ್ದರು ?

Mr. SPEAKER.—The question is disallowed. The Minister's resignation does not come under a supplementary. Discussion on Governor's Address is there and policy matters can be discussed then.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪಾನನಿರೋಧದ ನೀತಿಯನ್ನು ಬದಲಾಯಿಸಿರುವುದರಿಂದ ಸರ್ಕಾರಕ್ಕೆ ಎಷ್ಟು ರೆವಿನ್ಯೂ ಬರಬಹುದೆಂಬ ಅಂದಾಜು ಮಾಡಲಾಗಿದೆ ?

†ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ, ಸುಮಾರು 50 ಲಕ್ಷದಿಂದ ಒಂದು ಕೋಟಿ ರೂಪಾಯಿಗಳವರೆಗೆ ಬರಬಹುದು.